# ಎಲ್ಲವನ್ನೂ ಕಲಿಯುವಾಸೆ



ಅಂಕಿತಾ ಅಮರ್
ಕಲರ್ಸ್ ಕನ್ನಡದ 'ನಮ್ಮನೆ ಯುವರಾಣಿ'ಯ ಮೀರಾ

◆ **ನಿಮ್ಮ ಪರಿಚಯ ಹೇಳಿ...**

ಹುಟ್ಟಿದ್ದು ಮೈಸೂರು, ಬೆಳೆದಿದ್ದು ಬೆಂಗಳೂರು. ನಾನು ಎಂಎಸ್ಸಿ (ಬಯೋಕೆಮಿಸ್ಟ್ರಿ) ಯಲ್ಲಿ ಎರಡು ಚಿನ್ನದ ಪದಕದೊಂದಿಗೆ ಉತ್ತೀರ್ಣಳಾಗಿದ್ದೇನೆ. ಪಿಎಚ್.ಡಿ. ಮಾಡಬೇಕು ಎನ್ನುವ ಆಲೋಚನೆ ಕೂಡ ಇದೆ. ತಂದೆ ಅಮರ್ ಬಾಬು ಬ್ಯಾಂಕ್ ಉದ್ಯೋಗಿಯಾಗಿದ್ದರು. ತಾಯಿ ಆಶಾ, ತಂಗಿ ಅನನ್ಯಾ. ನಮ್ಮ ಮನೆಯಲ್ಲಿ ಎಲ್ಲರೂ ಕಲಾವಿದರು. ಅಮ್ಮ– ಅಪ್ಪ ಇಬ್ಬರೂ ಹವ್ಯಾಸಿ ರಂಗ ನಟರು. ಕಲಾಗಂಗೋತ್ರಿ ತಂಡದಲ್ಲಿದ್ದರು. ತಂಗಿ ಡಾನ್ಸರ್. ನಾನು ಡಾನ್ಸ್ ಜೊತೆ ಸಂಗೀತವನ್ನೂ ಅಭ್ಯಾಸ ಮಾಡಿದ್ದೇನೆ. ಪ್ರದರ್ಶನ ಕಲೆಯಲ್ಲಿ ತೊಡಗಿಸಿಕೊಂಡಿದ್ದೇನೆ.

◆ **ಕೊರೊನಾ ಸಂದರ್ಭದಲ್ಲಿ ರೋಗಿಗಳ ಸೇವೆ ಮಿಸ್ ಮಾಡಿಕೊಂಡೆ ಎಂದು ಅನ್ನಿಸುತ್ತಾ?**

ಆಸ್ಪತ್ರೆಯಲ್ಲಿ ಇಂಟರ್ನಿಯಾಗಿ ಕೆಲಸ ಮಾಡಿದ್ದೇನೆ. ಕೊರೊನಾ ತೀವ್ರತೆಯ ಅನುಭವ ನನಗಿದೆ. ಕಲಾವಿದೆಯಾಗಿದ್ದೇನೆ; ಅವಶ್ಯಕತೆ ಇದ್ದರೆ ಮಾತ್ರ ಮನೆಯಿಂದ ಹೊರಗೆ ಬರುತ್ತಿದ್ದೇನೆ. ಎಲ್ಲ ರೀತಿಯಿಂದಲೂ ಮುಂಜಾಗ್ರತೆ ತೆಗೆದುಕೊಳ್ಳುತ್ತೇನೆ. ಅಗತ್ಯದವರಿಗೆ ನನ್ನಿಂದಾಗುವ ನೆರವನ್ನೂ ಮಾಡುತ್ತಿದ್ದೇನೆ. ನಟನೆಯೇ ನನ್ನ ವೃತ್ತಿಯಾಗಿರುವುದರಿಂದ ಆ ರೀತಿಯ ಕೊರಗು ನನ್ನನ್ನು ಕಾಡಿಲ್ಲ. ಏನು ಮಾಡಬೇಕು ಎನ್ನುವ ಸರಿಯಾದ ಯೋಜನೆ ನನ್ನಲ್ಲಿ ಇದೆ. ಸಂಶೋಧನೆಯನ್ನೂ ಮುಂದುವರಿಸುತ್ತೇನೆ.

◆ **ಆರಂಭದ ದಿನಗಳ ಬಣ್ಣದ ಲೋಕ ನಿಮಗೆ ಹೇಗೆ ಅನ್ನಿಸಿತ್ತು?**

ಕ್ಯಾಮೆರಾ ಭಯ ಖಂಡಿತ ಇರಲಿಲ್ಲ. ಪೂರ್ಣಾವಧಿ ನಟಿಯಾದ ಮೊದಲ ದಿನದ ಚಿತ್ರೀಕರಣದಲ್ಲಿ ತುಂಬ ಭಾವುಕಳಾಗಿದ್ದೆ. ನನಗೆ ಆರಂಭದ ದಿನಗಳಲ್ಲಿ ಕಲಿಯಲು ಸ್ಫೂರ್ತಿದಾಯಕ ವಾತಾವರಣವಿತ್ತು. ಕ್ಯಾಮೆರಾ ಕುರಿತ ಅರಿವಿನ ಪಾಠ ತುಂಬ ಇಷ್ಟ ಆಯಿತು. ನಾನು ಹೇಗೆ ಕಾಣಿಸುತ್ತೇನೆ, ಪಾತ್ರವನ್ನು ಅರ್ಥಮಾಡಿಕೊಂಡು ಅದಕ್ಕೆ ಹೇಗೆ ಜೀವ ತುಂಬಬೇಕು ಎಂಬುದನ್ನು ಅರ್ಥ ಮಾಡಿಕೊಂಡೆ. ನಾನೊಂದು ಪಾತ್ರ ಮಾಡುತ್ತಿದ್ದರೆ ಸಹಪಾತ್ರವನ್ನೂ ಅರಿತರೆ ಸಹಜವಾಗಿ ಅಭಿನಯಿಸಬಹುದು ಎಂಬ ನಟನೆಯ ಮೂಲತತ್ವವನ್ನು ಆರಂಭದ ದಿನಗಳಲ್ಲಿಯೇ ಕಲಿಯಲು ಸಾಧ್ಯವಾಯಿತು.

◆ **ಈ ವೃತ್ತಿಯ ಪೂರ್ವದಲ್ಲಿ ನಟಿಸಿದ ಅನುಭವ ಇದೆಯಾ?**

ಚಿಕ್ಕವಯಸ್ಸಿನಲ್ಲಿಯೇ ಬಣ್ಣ ನನ್ನ ಮನಸಿನಲ್ಲಿ ಗರಿಗೆದರಿದೆ. ಶಾಲೆ– ಕಾಲೇಜಿನ ದಿನಗಳಲ್ಲಿ ಹಾಡು ಮತ್ತು ಡಾನ್ಸ್‌ಗೆ ಪ್ರಾಮುಖ್ಯ ಕೊಡ್ತಾ ಇದ್ದೆ. ಶಾಸ್ತ್ರೀಯ ನೃತ್ಯಾಭ್ಯಾಸ ಮಾಡಿದ್ದೇನೆ. ಪಠ್ಯೇತರ ಎಲ್ಲ ಸ್ಪರ್ಧೆಯಲ್ಲೂ ಭಾಗವಹಿಸುತ್ತಿದ್ದೆ. ಅದರ ಪ್ರಭಾವದಿಂದ ಬಾಲ್ಯದಲ್ಲಿಯೇ ನಟಿಸುವ ಅವಕಾಶವೂ ಸಿಕ್ಕಿದೆ. ಫಣಿರಾಮಚಂದ್ರ ಅವರ 'ಜಗಳಗಂಟಿ' ಧಾರಾವಾಹಿಯಲ್ಲಿ ಬಾಲನಟಿಯಾಗಿದ್ದೆ. 'ತುಂಟ' ಸಿನಿಮಾದಲ್ಲಿಯೂ ನಟಿಸಿದ್ದೇನೆ. ಸರ್ಕಾರದಿಂದ ಶಿಕ್ಷಣ, ಸ್ತ್ರೀ ಸಬಲೀಕರಣಕ್ಕೆ ಸಂಬಂಧಿಸಿದಂತೆ ರೂಪಿಸಿದ ಜನಜಾಗೃತಿ ಸಾಕ್ಷ್ಯಚಿತ್ರಗಳಲ್ಲಿ ಅಭಿನಯಿಸಿದ ಅನುಭವ ನನ್ನ ಬೆನ್ನಿಗಿದೆ.

◆ **ಪೂರ್ಣಾವಧಿ ನಟಿಯಾಗುವ ಅವಕಾಶ ಸಿಕ್ಕಿದ್ದು ಹೇಗೆ?**

ಅದು ತುಂಬಾ ಅನಿರೀಕ್ಷಿತ. ಏಕೆಂದರೆ ನಾನು ಯಾವುದೇ ಆಡಿಷನ್ ನೀಡಿ ಪಾತ್ರವನ್ನು ಪಡೆದಿಲ್ಲ. ಅದಾಗಿಯೇ ಬಂತು. ಅಂದರೆ, ಫೋನ್ ಕರೆ ಮಾಡಿ 'ನೀವು ನಟಿಸುತ್ತೀರಾ?' ಎಂದು ಕೇಳಿದರು. ಮೊದಲಿನಿಂದಲೂ ಆ ರೀತಿಯ ಕರೆಗಳು ಬರುತ್ತಿದ್ದವು. ಓದುವುದರ ಬಗ್ಗೆ ಹೆಚ್ಚಿನ ನಿಗಾ ಇದ್ದಿದ್ದರಿಂದ ಅಂತಹ ಅವಕಾಶಗಳನ್ನು ನಿರಾಕರಿಸಿದೆ. ನಾನು ಎಂಎಸ್ಸಿ ಮಾಡಿದ ನಂತರ ಮೀರಾ ಪಾತ್ರದಲ್ಲಿ ನಟಿಸುವ ಅವಕಾಶ ಬಂತು. ತಂದೆ ತಾಯಿ ಕೇಳಿದಾಗ 'ಈಗ ಅವಕಾಶವನ್ನು ಕಳೆದುಕೊಳ್ಳಬೇಡ, ಮಾಡು' ಎಂದು ಹುರಿದುಂಬಿಸಿದರು. 'ಪುಟ್ಟಗೌರಿ ಮದುವೆ'ಯಲ್ಲೂ ನಟಿಸಿದ್ದೆ. ಆದರೆ, ನನ್ನ ಓದು ಮುಗಿಸಿ ಪೂರ್ಣಾವಧಿ ನಟಿಯಾಗಿ ಬಂದ ಮೊದಲ ಧಾರಾವಾಹಿ 'ನಮ್ಮನೆ ಯುವರಾಣಿ'.

◆ **ಜನಪ್ರಿಯತೆಯ ನಂತರ ನಿಮ್ಮ ಜೀವನದಲ್ಲಿ ಆದ ಬದಲಾವಣೆ ಏನು?**

ಜನ ಗುರುತಿಸಿ ಪ್ರೀತಿಯಿಂದ ಮಾತನಾಡಿಸಿ ಫೋಟೊ ತೆಗೆದುಕೊಳ್ಳುತ್ತಾರೆ. ಮಾಲ್ ಒಂದರಲ್ಲಿ ನನ್ನನ್ನು ಒಳಕರೆದು ಉಪಚರಿಸಿದರು. ಸಾಮಾಜಿಕ ಮಾಧ್ಯಮಗಳಲ್ಲೂ ವೀಕ್ಷಕರು ಸಿಕ್ಕಾಪಟ್ಟೆ ಬೆಂಬಲ ನೀಡುತ್ತಾರೆ. ಈ ರೀತಿ ಗುರುತಿಸಿಕೊಳ್ಳಬೇಕು ಎನ್ನುವ ಬಯಕೆ ಇತ್ತು. ಆದರೆ ಈ ಬೆಳವಣಿಗೆ ನನ್ನ ವೈಯಕ್ತಿಕ ಜೀವನದಲ್ಲಿ ಯಾವ ಬದಲಾವಣೆ ಮಾಡಿಲ್ಲ. ಜನರು ಗುರುತಿಸುವುದೇ ದೊಡ್ಡದು, ಅವರಿಗೆ ಎಂದೆಂದೂ ಕೃತಜ್ಞತೆಯನ್ನು ಹೇಳಬಯಸುತ್ತೇನೆ. ಈಗ ಮೈಸೂರು ಸುನಿತಾ ಇಂದ್ರಕುಮಾರ್ ಅವರ ಬಳಿ ಭಾವಗೀತೆಯನ್ನು ಕಲಿಯುತ್ತಿದ್ದೇನೆ. ಏನಾದರೂ ಒಂದು ಆಗುವುದಕ್ಕಿಂತ ಎಲ್ಲವನ್ನೂ ಕಲಿಯಬೇಕು ಎನ್ನುವ ಬಯಕೆ ನನ್ನದು.

■ **ರಾಘವೇಂದ್ರ ಕೆ.**